ಪಶುಸಂಗೋಪನ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ

೩೭೪ (೩೮೩೭) **ಶ್ರೀಮತಿ ಸುನಿತ ವೀರಪ್ಪನಗೌಡ. ಜೆ (ಬನ್ನೂರು)**– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆ ಪಶುಚಿಕಿತ್ಸಾಲಯ ಹಾಗೂ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳೆಷ್ಟು;

ಆ) ಪಶು ಆಸ್ಪತ್ರೆ, ಪಶುಚಿಕಿತ್ಸಾಲಯ ಹಾಗೂ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಗೆ ಮಂಜೂರಾದ ಪಶು ವೈದ್ಯರು, ಪಶುಪರೀಕ್ಷಕರು ಮತ್ತು ಗ್ರೂಪ್ ಡಿ ನೌಕರರ ಹುದ್ದೆಗಳಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು;

ಇ) ಈ ಹುದ್ದೆಗಳನ್ನು ಶೀಘ್ರವಾಗಿ ಭರ್ತಿಮಾಡಿ ರೈತರಿಗೆ ಅವರ ಜಾನುವಾರುಗಳ ರಕ್ಷಣೆಗೆ ಸಕಾಲಿಕ ಸೇವೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ ಹಾಗೂ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ವಿವರ ಈ ಕೆಳಕಂಡಂತಿದೆ.

ಪಶು ಆಸ್ಪತ್ರೆ	೨೯೪
ಪಶು ಚಿಕಿತ್ಸಾಲಯ	೧೪೫೧
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	೧೪೫೬
ಒಟ್ಟು	**೩೨೦೧**

ಆ) ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಮಂಜೂರಾದ ಹಾಗೂ ಖಾಲಿ ಇರುವ ಪಶುವೈದ್ಯರ ಮತ್ತು ವಿವಿಧ ವೃಂದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಹುದ್ದೆಗಳ ವಿವರ	ಮಂಜೂರು	ಭರ್ತಿ	ಖಾಲಿ
ಸಹಾಯಕ ನಿರ್ದೇಶಕರು	೪೬೫	೪೨೭	೩೮
ಪಶುವೈದ್ಯಾಧಿಕಾರಿಗಳು	೧೮೭೫	೯೩೯	೯೩೬
ಪಶುಮೇಲ್ವಿಚಾರಕರು	೨೬೬	೧೨೧	೧೪೫
ಹಿರಿಯ ಪಶುಪರೀಕ್ಷಕರು	೨೧೦೧	೧೭೭೧	೩೩೦
ಪಶುಪರೀಕ್ಷಕರು	೧೬೫೬	೧೧೪೭	೫೦೯
ಪಶುವೈದ್ಯಕೀಯ ಸಹಾಯಕರು	೨೪೪೨	೧೬೯೯	೭೪೩
ಡಿ ದರ್ಜೆ ನೌಕರರು	೬೪೮೭	೫೧೦೩	೧೩೮೪
ಒಟ್ಟು	**೧೫೨೯೨**	**೧೧೨೦೭**	**೪೦೮೫**

ಇ) ೬೦ ಪಶುವೈದ್ಯಾಧಿಕಾರಿಗಳಿಗೆ ಆದೇಶ ಸಂಖ್ಯೆ ಪಸಂಮೀ:೨೦೭ ಪಸೇ;೨೦೦೪ ದಿನಾಂಕ ೨೪.೦೫.೨೦೦೫ರಲ್ಲಿ ಸಹಾಯಕ ನಿರ್ದೇಶಕರಾಗಿ ಮುಂಬಡ್ತಿ ನೀಡಲಾಗಿದೆ. ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ೧೯೧ ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ:ಪಸಂಮೀ; ೧೧೬ ಪಸಸೇ: ೨೦೦೩ ದಿನಾಂಕ ೩೦-೦೫-೨೦೦೫ ರಲ್ಲಿ ಸಕ್ರಮಗೊಳಿಸಲಾಗಿದೆ. ೨೫೦ ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿಯ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಪಶುವೈದ್ಯಕೀಯ ಮೇಲ್ವಿಚಾರಕರ ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಇಲಾಖಾ ಮುಂಬಡ್ತಿ ಸಭೆ ದಿನಾಂಕ ೨೯-೦೬-೨೦೦೫ ರಂದು ನಡೆಸಲಾಗಿದೆ.

ಪಶುವೈದ್ಯಕೀಯ ಪರೀಕ್ಷಕರನ್ನು ೫೦:೫೦ ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

೧೫೦ ಪಶುವೈದ್ಯಕೀಯ ಸಹಾಯಕರನ್ನು ಪಶುವೈದ್ಯಕೀಯ ಪರೀಕ್ಷಕರಾಗಿ ಮುಂಬಡ್ತಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಖಾಲಿ ಇರುವ ೧೩೮೪ ಡಿ ದರ್ಜೆ ಹುದ್ದೆಗಳನ್ನು ಇತರೆ ಇಲಾಖೆಗಳಿಂದ ಮರುವಿನ್ಯಾಸದ ಮೂಲಕ ಹಾಗೂ ಅನುಕಂಪಾರ್ಥದ ಮೂಲಕ ಭರ್ತಿ ಮಾಡಲು ಕ್ರಮ. ತೆಗೆದುಕೊಳ್ಳಲಾಗುತ್ತದೆ.

<u>ಗದಗ ತಾಲ್ಲೂಕು ಹರ್ಲಾಪೂರ ಮಸೀದಿಗೆ ಅನುದಾನ ಮಂಜೂರಾಗಿರುವುದು.</u>

೩೭೫೫ (೪೦೭೭) **ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ)** :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಹರ್ಲಾಪುರ ಹಾಗೂ ಬಾಗೇವಾಡಿ ಗ್ರಾಮದ ಮಸೀದಿಗಳಿಗೆ ಮಂಜೂರಾಗಿದ್ದ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರಿದ್ದು ಸದರಿ ಹಣವನ್ನು ಬಿಡುಗಡೆ ಮಾಡಲಾಗಿದೆಯೇ;

ಆ) ಬಿಡುಗಡೆ ಮಾಡದ್ದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಮೆರಾಜುದ್ದೀನ್ ಎನ್.ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಯಾವ ಪ್ರಸ್ತಾವನೆಯೂ ಬಾರದೇ ಇರುವ ಕಾರಣ ಹಣ ಮಂಜೂರು ಮಾಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

೩೮೪೪ (೪೭೬೬) **ಶ್ರೀ ಅಲ್ಕೋಡ್ ಹನುಮಂತಪ್ಪ. ವೈ (ದೇವದುರ್ಗ)** :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಗೆ ಕಳೆದ ೩ ವರ್ಷಗಳಿಂದ ವಿವಿಧ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು? ತಾಲ್ಲೂಕುವಾರು ವಿವರ ನೀಡುವುದು;

ಆ) ರೇಷ್ಮೆ ಇಲಾಖೆಯಲ್ಲಿ ಇರುವ ಯೋಜನೆಗಳಾವುವು ; (ಪೂರ್ಣ ವಿವರಗಳೊಂದಿಗೆ ನೀಡುವುದು);

ಇ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿಗೆ ಕಳೆದ ೩ ವರ್ಷಗಳಿಂದ ಯಾವ ಯಾವ ಯೋಜನೆಗಳ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಮಂಜೂರಾದ ಹಣವೆಷ್ಟು; ಖರ್ಚಾದ ಮತ್ತು ಉಳಿದ ಹಣವೆಷ್ಟು; (ವರ್ಷಾವಾರು ಯೋಜನೆವಾರು ಲೆಕ್ಕ ಶೀರ್ಷಿಕೆ ನೀಡುವುದು);